ಸಿಸಿ ಸಂಖ್ಯೆ 1315/2021

Cw-2

**ದಿನಾಂಕ 5-10-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಜಿ ಪಿ ವಕೀಲರಿಂದಃ**

ನಾನು ಮತ್ತು ಪಿರ್ಯಾದುದಾರರು 20 ವರ್ಷಗಳಿಂದ ಪರಿಚಯಸ್ಥರು. ಪಿರ್ಯಾದುರರು ನನ್ನ ಸ್ನೇಹಿತರು ಮತ್ತು ನಾನು ಅವರ ಅಂಗಡಿಯ ಗ್ರಾಹಕನಾಗಿರುತ್ತೇನೆ. ನನ್ನ ಮತ್ತು ಪಿರ್ಯಾದುದಾರರ ನಡುವೆ ಯಾವುದೇ ಹಣದ ವ್ಯವಹಾರ ಇರುವುದಿಲ್ಲ. ದಿನಾಂಕ 22-9-2021 ರಂದು ಆರೋಪಿಯು ಪಿರ್ಯಾದುದಾರರಿಗೆ ರೂ. 5,50,000 ಮೊತ್ತಕ್ಕೆ ನಿಸಿ-1 ಚೆಕ್ ನೀಡಿರುತ್ತಾರೆ. ಸದರಿ ಚೆಕ್ ಸಿಂಡಿಕೇಟ್ ಬ್ಯಾಂಕಿಗೆ ಸಂಬಂಧಿಸಿರುತ್ತದೆ. ದಿನಾಂಕ 22-9-2021 ರಂದು ಸಂಜೆ 7 ಗಂಟೆಗೆ ಪಿರ್ಯಾದುದಾರರ ಸಾಯಿ ಟ್ರೇಡರ್ ಅಂಗಡಿಗೆ ಹೋಗಿರುತ್ತೇನೆ. ಪಿರ್ಯಾದುದಾರಿಗೆ ಸದರಿ ಅಂಗಡಿಯನ್ನು ಹೊರತುಪಡಿಸಿ ಸಲೂನ್ ಶಾಪ್ ಕೂಡ ಇರುತ್ತದೆ. ನಿಸಿ-1 ನ್ನು ಕೊಡುವಾಗ ಆರೋಪಿ ನನ್ನ ಸಮಕ್ಷಮ ಅದಕ್ಕೆ ಸಹಿ ಮಾಡಿರುತ್ತಾರೆ. ನಿಸಿ-1 ನ್ನು ಯಾರು ಬರೆದಿದರುತ್ತಾರೆಂದು ಗೊತ್ತಿರುವುದಿಲ್ಲ ನನ್ನ ಸಮಕ್ಷಮ ಸಹಿ ಮಾತ್ರ ಮಾಡಿರುತ್ತಾರೆ. ಐದಾರು ವರ್ಷಗಳಿಂದ ಆರೋಪಿಯು ನನಗೆ ಪರಿಚಯ ಇರುತ್ತಾರೆ. ಆರೋಪಿಯು ಮೂಡಬಿದ್ರೆಯ ಮಾತೃಭೂಮಿ ಸಹಕಾರ ಸಂಘದಲ್ಲಿ ಸಾಲ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಮತ್ತು ಪಿರ್ಯಾದುದಾರರ ನಡುವೆ ಏನೆಲ್ಲಾ ವ್ಯವಹಾರ ನಡೆದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ಇರುವುದಿಲ್ಲ. ನಿಸಿ-1 ಅಮಾನ್ಯಗೊಂಡ ನಂತರ ಪಿರ್ಯಾದುದಾರರು ನನಗೆ ಸಾಕ್ಷಿದಾರರಾಗಿ ನ್ಯಾಯಾಲಯಕ್ಕೆ ಬರುವಂತೆ ಹೇಳಿರುತ್ತಾರೆ. ಯಾವ ದಿನಾಂಕ ಈ ವಿಚಾರವನ್ನು ಪಿರ್ಯಾದುದಾರರು ನನಗೆ ತಿಳಿಸಿರುತ್ತಾರೆಂದು ನೆನಪಿರುವುದಿಲ್ಲ. ಈ ಪಿರ್ಯಾದನ್ನು ಸಲ್ಲಿಸುವ 10 ದಿನಗಳ ಪೂರ್ವದಲ್ಲಿ ಈ ಬಗ್ಗೆ ತಿಳಿಸಿರುತ್ತಾರೆ.

2. ನಿಸಿ-1 ನ್ನು ನೀಡುವಾಗ ನಾನು, ಆರೋಪಿ, ಪಿರ್ಯಾದುದಾರರು ಮತ್ತು ಪಿರ್ಯಾದುದಾರರ ಹೆಂಡತಿ ಇದ್ದೆವು. ಆರೋಪಿ ಒಬ್ಬರೇ ಬಂದಿದ್ದರು. ಆರೋಪಿ ನಿಸಿ-1 ನ್ನು ಮಾತ್ರ ತಂದಿದ್ದರು. ಆರೋಪಿ ನಿಸಿ-1 ನ್ನು ನೀಡಿದಾಗ ನಾನು ಸ್ಥಳದಲ್ಲಿ ಇರಲಿಲ್ಲದಿದ್ದರೂ ಪಿರ್ಯಾದುದಾರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಆ ಸಮಯ ನಾನು ಸಹ ಇದ್ದೆನು. ನಾನು ಪಿರ್ಯಾದುದಾರರ ಶಾಪ್ ನಲ್ಲಿ ಇರುವಾಗ ಆರೋಪಿಯು ಬಂದಿರುತ್ತಾರೆ, ಪಿರ್ಯಾದುದಾರರು ಆರೋಪಿ ಬರುವ ವಿಚಾರವನ್ನು ನನಗೆ ಮೊದಲೇ ತಿಳಿಸಿರಲಿಲ್ಲ. ಆರೋಪಿ

ಸಿಸಿ ಸಂಖ್ಯೆ 1315/2021

Cw-2

ನಿಸಿ-1 ನ್ನು ಪಿರ್ಯಾದುದಾರರಿಗೆ ನೀಡಿದದ್ದಾಗಲಿ ಮತ್ತು ನಾನು ಅಲ್ಲಿ ಇದ್ದದಾಗಲಿ ಸುಳ್ಳು ಎಂದರೆ ಸರಿಯಲ್ಲ. ನಾನು ಪೈಂಟಿಗೆ ಗುತ್ತಿಗೆ ಕೆಲಸ ಮಾಡುತ್ತೇನೆ. ನಾನು ಮತ್ತು ಪಿರ್ಯಾದುದಾರರು ಸೇರಿ ದುರ್ಲಾಬ ಮಾಡುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

(ಸಾ. ಓ. ಹೇ. ಕೇ. ಸ. ಇ. ಎ. ಒ.)